**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 686/2014**

**ಪಿ.ಡಬ್ಲ್ಯೂ: 16**

**ಸಿ.ಡಬ್ಲ್ಯೂ: 20**

**ಹೆಸರು** : ಸಿ.ಟಿ.ಮಹೇಂದ್ರಪ್ಪ

ತಂದೆಯ **ಹೆಸರು** : ಲೇಟ್ ಕರಿಬಸಪ್ಪ

**ವಯಸ್ಸು** : **62 ವರ್ಷ**

**ಉದ್ಯೋಗ** : ನಿವೃತ್ತ ಎ ಎಸ್ ಐ

**ವಾಸಸ್ಥಳ** : ಅಜ್ಜಂಪುರ

**ದಿನಾಂಕ: 16-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು ದಿ: *12-08-2011* ರಿಂದ *04-01-2016* ರವರೆಗೆ **ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ** ಮುಖ್ಯ **ಪೇದೆ ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕ:*15-03-2014* ರಂದು ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-*21* ರವರು ಬಾವಿಕೆರೆಗೆ ಹೋಗಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರನ್ನು ಬೆಳಿಗ್ಗೆ *11-30* ರಿಂದ *12-00* ರವರೆಗೆ ಬರೆದಿರುತ್ತೇವೆ. ಘಟನಾ ಸ್ಥಳದಲ್ಲಿ ನಕ್ಷೆಯನ್ನು ತಯಾರು ಮಾಡಿ ಮಹಜರ್ ಕ್ರಮವನ್ನು ನಾನೇ ನನ್ನ ಸ್ವ ಹಸ್ತದಿಂದ ಬರೆದಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ನಿಪಿ-*4* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*4(ಬಿ)* ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ.**

ನಿಪಿ-*4* ರಲ್ಲಿ ನಮೂದು ಮಾಡಿರುವ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಿಪಿ-*4* ರ ಮಹಜರ್ ಕ್ರಮದಲ್ಲಿ ಚಕ್ಕುಬಂದಿಯನ್ನು ನಮೂದು ಮಾಡಿರುತ್ತೇವೆ. ಘಟನಾ ಸ್ಥಳವನ್ನು ನಮಗೆ ಕಲ್ಲುಮರಳಪ್ಪನವರು

ತೋರಿಸಿರುತ್ತಾರೆ. ಘಟನಾ ಸ್ಥಳಕ್ಕೆ ಕಲ್ಲು ಮರಳಪ್ಪನವರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ಬರೆದ ಸ್ಥಳವು ಈಗಲೂ ಸಹ ಕೃಷಿ ಸಂಶೋಧನ ಹೆಸರಿನಲ್ಲಿದೆ ಎಂದರೆ ಸರಿ. ನಾನು ಬರೆದ ನಿಪಿ-4ರ ಮಹಜರ್ ಗೆ ಸ್ಥಳದಲ್ಲಿ ಯಾರೂ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**